ಶ್ರೀ ಪಿ.ಜಿ.ಆರ್.ಸಿಂಧ್ಯ : ಹೊಸ ಸದಸ್ಯರಿಗೆ ತಾವು ಅವಕಾಶ ಕೊಟ್ಟು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಇದಕ್ಕೆ ನಾನು ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಈಗ ಮಾನ್ಯ ಸದಸ್ಯರೆಲ್ಲರೂ ಹೇಳಿರತಕ್ಕಂಥ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡಿರುತ್ತೇವೆ. ರಮಣದುರ್ಗದಲ್ಲಿ 50 ಪರ್ಸೆಂಟ್ ಜಾಗದಲ್ಲಿ ಎಂದು ಉತ್ತರ ಕೊಡಲಾಗಿದೆ. ಆದರೆ, 50 ಪರ್ಸೆಂಟ್ ಎಂದರೆ ಎಷ್ಟು ಎಕರೆ ಜಮೀನು ಆಗುತ್ತದೆಂಬುದನ್ನು ಹೇಳಬೇಕೆಂದು ಮಾನ್ಯ ಅರಗ ಜ್ಞಾನೇಂದ್ರರವರು ಈಗಾಗಲೇ ಕೇಳಿದ್ದಾರೆ. ಆದರೆ, ಈ ಮಾಹಿತಿ ನನ್ನ ಹತ್ತಿರ ಸಧ್ಯದಲ್ಲಿ ಇಲ್ಲ. ಈ ಮಾಹಿತಿಯನ್ನು ಅನಂತರ ಅವರಿಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಕುಮಾರಸ್ವಾಮಿಯವರು ಮತ್ತು ಮಾನ್ಯ ಮಹಿಮಾ ಪಟೇಲ್‌ರವರು ಹೇಳಿರತಕ್ಕಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಈ ವಿಷಯ ಈಗ ಸುಪ್ರೀಂ ಕೋರ್ಟ್ ಮುಂದೆ ಇದೆ. ಡಿಸೆಂಬರ್ 2005ರ ಹೊತ್ತಿಗೆ ಸುಪ್ರೀಂ ಕೋರ್ಟ್‌ನಿಂದ ಇದರ ಬಗ್ಗೆ ತೀರ್ಪು ಬರುತ್ತದೆ. ಆ ತೀರ್ಪಿನ ನಂತರ ಇದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು ಈಗ ನಮ್ಮ ಕೈಯಲ್ಲಿರತಕ್ಕಂಥ ಪ್ರಶ್ನೆಯಲ್ಲ. ಇದೆಲ್ಲದರ ಜೊತೆಗೆ ಅಲ್ಲಿ ತುಂಗಾ, ಭದ್ರಾ ಮತ್ತು ತುಂಗಾಭದ್ರಾ ನದಿಯ ನೀರು ಕೆಡುತ್ತಿದೆ. ಹಾಗೆಯೇ, ಇದರ ಒಂದು ಸಿಲ್ಟ್‌ನಿಂದ ಬಹಳ ತೊಂದರೆಯಾಗುತ್ತಿರುವುದು ಮತ್ತು ಪರಿಸರ ನಾಶವಾಗುತ್ತಿರುವುದು ನಿಜ. ಮತ್ತೆ ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಕುದುರೆಮುಖ ಗಣಿಗಾರಿಕೆಯಿಂದ 1 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಬರತಕ್ಕಂಥದ್ದೂ ಕೂಡ ನಿಜ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಎಲ್ಲೋ ಒಂದು ಕಡೆ ಆ ಬ್ಯಾಲೆನ್ಸನ್ನು ಸ್ಟ್ರೈಕ್ ಮಾಡಬೇಕಾಗುತ್ತದೆ. ಈ ಒಂದು ಬ್ಯಾಲೆನ್ಸನ್ನು ನಮ್ಮ ಕ್ಯಾಬಿನೆಟ್‌ನಲ್ಲಿ ಸ್ಟ್ರೈಕ್ ಮಾಡುತ್ತೇವೆ.

(ಉ) ವಿಷಯ: ಮಂಡ್ಯ ಜಿಲ್ಲೆಯಲ್ಲಿ ಸರ್ಕಾರ ಮಂಜೂರು ಮಾಡಿದ ಜಮೀನನ್ನು ಉದ್ದೇಶಿತ ಚಟುವಟಿಕೆಗಳಿಗೆ ಸಕಾಲದಲ್ಲಿ ಉಪಯೋಗಿಸಿಕೊಳ್ಳದಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

ಉಪಾಧ್ಯಕ್ಷರು : ಮಾನ್ಯ ಅನ್ನದಾನಿಯವರು ಸರ್ಕಾರದ ಗಮನ ಸೆಳೆಯಬೇಕು.

ಡಾ: ಕೆ.ಅನ್ನದಾನಿ(ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಮಂಜೂರು ಮಾಡಿದ ಜಮೀನನ್ನು

ಉದ್ದೇಶಿತ ಚಟುವಟಿಕೆಗಳಿಗೆ ಸಕಾಲದಲ್ಲಿ ಉಪಯೋಗಿಸಿಕೊಳ್ಳದಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಇಡೀ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಹಿತಿ ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಗಳು ನಮಗೆ ತತ್‌ಕ್ಷಣದಲ್ಲಿ ಲಭ್ಯವಾಗಿಲ್ಲ. ಯಾವ್ಯಾವ ಉದ್ದೇಶಕ್ಕಾಗಿ ಜಮೀನುಗಳನ್ನು ಕೊಟ್ಟಿದ್ದೆಯೋ ಆ ಜಮೀನುಗಳನ್ನು ಅವರು ಉದ್ದೇಶಿತ ಕಾರ್ಯಕ್ರಮಕ್ಕಾಗಿ ಉಪಯೋಗಿಸಿ ಕೊಳ್ಳದಿದ್ದರೆ ಅದನ್ನು ಮರಳಿ ಪಡೆಯತಕ್ಕಂಥ ಅಂತರ್ಗತ ಅಧಿಕಾರ ಸರ್ಕಾರಕ್ಕೆ ಇದೆ. ಆದ್ದರಿಂದ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ಸಂಪೂರ್ಣವಾದ ಉತ್ತರ ಬಂದ ನಂತರ, ಅಧಿವೇಶನ ಇಲ್ಲದೆ ಇದ್ದರೂ ಕೂಡ ಪತ್ರ ಮುಖೇನ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಡಾ: ಕೆ.ಅನ್ನದಾನಿ : ಮಾನ್ಯ ಉಪಾಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ 7 ತಾಲ್ಲೂಕುಗಳು ಬರುತ್ತವೆ. ಈ ಎಲ್ಲಾ ತಾಲ್ಲೂಕುಗಳಲ್ಲಿ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಮತ್ತು ವಿದ್ಯಾರ್ಥಿ ನಿಲಯಗಳನ್ನು ಹಾಗೂ ಕಾಲೇಜುಗಳನ್ನು, ಸ್ಕೂಲ್‌ಗಳ ಕಟ್ಟಡಗಳನ್ನು ಕಟ್ಟಲಿಕ್ಕೆ ಸರ್ಕಾರದ ವತಿಯಿಂದ ಜಮೀನನ್ನು ಮಂಜೂರು ಮಾಡಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಂಜೂರು ಮಾಡಿರತಕ್ಕಂಥ ಜಮೀನುಗಳಲ್ಲಿ ಬಹಳಷ್ಟು ಶಿಕ್ಷಣ ಸಂಸ್ಥೆಗಳು ಸದುಪಯೋಗ ಮಾಡಿಕೊಂಡಿವೆ. ಮತ್ತೆ ನನ್ನ ಮಳವಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂಥ ಸರ್ವೆ ನಂ.653 ರಲ್ಲಿ 10 ಎಕರೆ ಜಮೀನನ್ನು ಸರ್ಕಾರದ ವತಿಯಿಂದ 1987ರಲ್ಲಿ ನವೋದಯ ಶಿಕ್ಷಣ ಸಂಸ್ಥೆಗೆ ಮಂಜೂರಾಗಿದೆ. ಈ ಶಿಕ್ಷಣ ಸಂಸ್ಥೆಗೆ ಜಮೀನನ್ನು ಮಂಜೂರು ಮಾಡಿದಮೇಲೆ 1988ರಲ್ಲಿ ಪರಮೇಶ್ವರಪ್ಪ ಎಂಬ ಸಾರ್ವಜನಿಕರು ಇದರ ವಿರುದ್ಧವಾಗಿ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದಾರೆ. ಈ ತಡೆಯಾಜ್ಞೆಯನ್ನು ತಂದಿರತಕ್ಕಂಥ ಸಂದರ್ಭದಲ್ಲಿ ಅಂದರೆ, 1988ರಲ್ಲಿ ನ್ಯಾಯಾಲಯದಲ್ಲಿ ದಾವೆಹೂಡಿದ್ದು, ಈ ಕೇಸ್ 1996ನೇ ಇಸವಿಯಲ್ಲಿ ಇತ್ಯರ್ಥವಾಯಿತು. ಈ ಜಮೀನಿನ ಬಗ್ಗೆ ನವೋದಯ ಶಿಕ್ಷಣ ಸಂಸ್ಥೆಯ ಪರವಾಗಿಯೇ ಉಚ್ಚನ್ಯಾಯಾಲಯ ತೀರ್ಪನ್ನು ಎತ್ತಿ ಹಿಡಿದಿದೆ. ಆದರೆ, 1996ನೇ ಇಸವಿಯಿಂದ ಇಲ್ಲಿಯವರೆಗೆ ಯಾವ ಖಾಸಗಿ ಶಿಕ್ಷಣ ಸಂಸ್ಥೆ ಯಾವ

ಉದ್ದೇಶಕ್ಕೋಸ್ಕರ ಈ ಜಮೀನನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಂಡಿದ್ದಾರೆಯೋ ಆ ಉದ್ದೇಶಕ್ಕಾಗಿ ಆ ಜಮೀನನ್ನು ಇವತ್ತಿನ ದಿವಸ ಬಳಸಿಕೊಂಡಿಲ್ಲ. ಸಾರ್ವಜನಿಕರು ಇದರ ಬಗ್ಗೆ ನೀಡಿರತಕ್ಕಂಥ ದೂರಿನ ಅನ್ವಯ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಸರ್ಕಾರ ಯಾವ ಒಂದು ಉದ್ದೇಶಕ್ಕಾಗಿ ಈ ಖಾಸಗಿ ಶಿಕ್ಷಣ ಸಂಸ್ಥೆಗೆ ಜಮೀನು ಮಂಜೂರು ಮಾಡಿದೆಯೋ ಆ ಒಂದು ಉದ್ದೇಶಕ್ಕಾಗಿ ಈ ಜಮೀನನ್ನು ಬಳಸಿಕೊಂಡಿಲ್ಲ. ಆದ್ದರಿಂದ, ಇದನ್ನು ಮತ್ತೆ ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟರು. ಜಿಲ್ಲಾಧಿಕಾರಿಗಳು ಇದರ ಬಗ್ಗೆ ವರದಿ ಕೊಟ್ಟರೂ ಸಹ ಇವತ್ತಿನವರೆಗೆ ಅದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು : ಒಂದು ನಿಮಿಷದಲ್ಲಿ ಕ್ಲಾರಿಫಿಕೇಷನ್ ಆಗಬೇಕು. ತಾವು ಹೀಗೆ ಕೇಳುತ್ತಾ ಹೋದರೆ ಇನ್ನು ಅರ್ಧ ಗಂಟೆಯಾಗುತ್ತದೆ. ಮತ್ತೆ ಮಾನ್ಯ ಸಚಿವರು ಹೇಗೆ ಉತ್ತರ ಕೊಡುತ್ತಾರೆ? ಇನ್ನು ಮಾತನಾಡತಕ್ಕಂಥವರು ಬಹಳ ಜನ ಇದ್ದಾರೆ. ಕ್ಲಾರಿಫಿಕೇಷನ್‌ಗೆ ಕೇವಲ ಒಂದು ನಿಮಿಷ ಕೊಡಲಾಗುತ್ತದೆ.

ಡಾ: ಕೆ. ಅನ್ನದಾನಿ : ಮಾನ್ಯ ಉಪಾಧ್ಯಕ್ಷರೆ, ಇನ್ನು ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತಿನದಿವಸ ಸರ್ಕಾರ ಒಂದು ಆದೇಶ ಮಾಡಿದೆ, ಅದೇನೆಂದರೆ, ಯಾವುದಾದರೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಜಮೀನನ್ನು ಕೊಟ್ಟರೆ ಅದನ್ನು ಎರಡು ವರ್ಷದೊಳಗೆ ಉಪಯೋಗ ಮಾಡಿಕೊಳ್ಳಬೇಕೆಂದು ಆದೇಶ ಇದೆ. ಆದರೆ, ಈ ಒಂದು ಖಾಸಗಿ ಶಿಕ್ಷಣ ಸಂಸ್ಥೆಗೆ 1987ರಲ್ಲಿ ಕೊಟ್ಟಿರತಕ್ಕಂಥ ಜಮೀನನ್ನು ಇವತ್ತಿನವರೆಗೆ ಕೂಡ ಸದುಪಯೋಗ ಪಡಿಸಿಕೊಂಡಿಲ್ಲ. ಮತ್ತೆ ಅಲ್ಲಿ ಯಾವುದೇ ರೀತಿಯ ಕಟ್ಟಡ ಕಟ್ಟದೆ ಮತ್ತು ಅಲ್ಲಿ ಯಾವುದೇ ರೀತಿಯ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡದೇ ಇರುವುದರಿಂದ ಸರ್ವೆ ನಂ.653ರಲ್ಲಿರತಕ್ಕಂಥ 10 ಎಕರೆ ಜಮೀನನ್ನು ಸರ್ಕಾರದ ಆದೇಶದನ್ವಯ ಕೂಡಲೇ ವಾಪಸ್ಸು ಪಡೆಯಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಶಿಕ್ಷಣ ಸಂಸ್ಥೆಯಾಗಿರುವ ನವೋದಯ ಶಿಕ್ಷಣ ಸಂಸ್ಥೆಗೆ ಸಂಬಂಧಪಟ್ಟಂತೆ ಗಮನ ಸೆಳೆಯುವ ವಿಚಾರವಾಗಿದ್ದರೆ ನನಗೆ ತಕ್ಷಣ ಇದರ ಉತ್ತರ ಸಿಗುತ್ತಿತ್ತು. ಆದರೆ, ಇಡೀ

ಜಿಲ್ಲೆಯಲ್ಲಿರತಕ್ಕಂಥ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಒಟ್ಟು ಭೂಮಿಯನ್ನು ಸರ್ಕಾರದಿಂದ ಕೊಡಲಾಗಿದೆ ಮತ್ತು ಎಷ್ಟು ಜನ ಇದರ ಉಪಯೋಗ ಮಾಡಿದ್ದಾರೆ ಎಂಬುದು ಮತ್ತು ಉಪಯೋಗ ಮಾಡದೇ ಇರತಕ್ಕಂಥವರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಆದ್ದರಿಂದ, ಈ ಎಲ್ಲಾ ಮಾಹಿತಿಗಳ ಸಂಗ್ರಹಕ್ಕೆ ಸ್ವಲ್ಪ ಕಾಲಾವಕಾಶವನ್ನು ನಾವು ಕೇಳಿದ್ದೇವೆ. ಮಾನ್ಯ ಸದಸ್ಯರು ತಿಳಿಸಿರತಕ್ಕಂಥ ಶಿಕ್ಷಣ ಸಂಸ್ಥೆಯ ಬಗ್ಗೆ ಜಿಲ್ಲಾಧಿಕಾರಿಗಳು ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ ಎನ್ನತಕ್ಕಂಥದ್ದು ಈಗ ನನಗೆ ಮಾನ್ಯ ಸದಸ್ಯರಿಂದಲೇ ತಿಳಿದು ಬಂದಿದೆ. ನಾವು ಯಾವ ಉದ್ದೇಶಕ್ಕಾಗಿ ಜಮೀನನ್ನು ಕೊಟ್ಟಿದ್ದೇವೆಯೋ ಆ ಉದ್ದೇಶವನ್ನು ಅವರು ಪರಿಪಾಲಿಸದಿದ್ದರೆ ಮತ್ತು ನಾವು ಜಮೀನು ಕೊಡುವಂಥ ಸಂದರ್ಭದಲ್ಲಿ ಕೆಲವು ಷರತ್ತುಗಳನ್ನು ಹಾಕಿರುತ್ತೇವೆ. ಈ ಷರತ್ತುಗಳ ಅನುಗುಣವಾಗಿ ನಡೆಯದಿದ್ದರೆ ಕಾನೂನು ಪ್ರಕಾರವಾಗಿ ಕ್ರಮವನ್ನು ಕೈಗೊಳ್ಳುತ್ತೇವೆ. ಅಧಿವೇಶನ ಮುಗಿದರೂ ಕೂಡ ಮಾನ್ಯ ಶಾಸಕರು ಕೇಳಿರತಕ್ಕಂಥ ಪ್ರಶ್ನೆಗೆ ನಾನು ಉತ್ತರವನ್ನು ಕಳುಹಿಸಿಕೊಡುತ್ತೇನೆ. ಮತ್ತೆ ಸರ್ಕಾರ ಖಂಡಿತವಾಗಿ ಕ್ರಮಕೈಗೊಳ್ಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಅಲ್ಕೋಡ್ ವೈ. ಹನುಮಂತಪ್ಪನವರೆ, ತಾವು ಸೆಳೆದಿರತಕ್ಕಂಥ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡಲು ಮಂತ್ರಿಗಳು ಇಲ್ಲ.

ಶ್ರೀ ಅಲ್ಕೋಡ್ ವೈ. ಹನುಮಂತಪ್ಪ : ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕಾಗಿದೆ.

ಉಪಾಧ್ಯಕ್ಷರು : ಮಂತ್ರಿಗಳು ವಿಧಾನಪರಿಷತ್‌ನಲ್ಲಿದ್ದಾರೆ.

ಶ್ರೀ ಅಲ್ಕೋಡ್ ವೈ. ಹನುಮಂತಪ್ಪ : ಮಾನ್ಯ ಉಪಾಧ್ಯಕ್ಷರೆ, ನಾಳೆದಿವಸ ಸದನ ಇಲ್ಲವೆಂದು ತಿಳಿದುಕೊಂಡಿದ್ದೇನೆ.

ಉಪಾಧ್ಯಕ್ಷರು : ಮಂತ್ರಿಗಳು ವಿಧಾನಪರಿಷತ್‌ನಲ್ಲಿದ್ದಾರೆ. ಅವರು ಬಂದನಂತರ ತಾವು ಪ್ರಸ್ತಾಪ ಮಾಡಿ.

ಶ್ರೀ ಅಲ್ಕೋಡ್ ವೈ. ಹನುಮಂತಪ್ಪ : ಮಾನ್ಯ ಸಚಿವರು ಬಂದನಂತರ ನನಗೆ ಅವಕಾಶ ಕೊಡಬೇಕು.